
ಕವಿತೆ




## ನಾಗರೇಖಾ ಗಾಂವಕರ

ಕಲೆ: ರೂಪಶ್ರೀ ಕಲ್ಲಿಗನೂರು

# ಇದ್ದಿಲು ಕೆಂಡ

ಇದ್ದಿಲಿಗೂ ಕೆಂಡಕ್ಕೂ
ಆಗಾಗ ಹೀಗೆ ನಡೆಯುತ್ತದೆ ಮಾತುಕತೆ
ವಾಗ್ವಾದ.
ಒಂದರೊಳಗೊಂದು ಬೆಸೆದ ಸೊಗಸಿದ್ದು,
ಒಸಗೆಯಾಗದ ನಾದ.

ಮುಟ್ಟಿದರೆ ಸಾಕು ಕಪ್ಪು ಮಸಿ
ನಿನ್ನ ನೋಡುವುದೇ ಕಣ್ಣಿಗೆ ಕಸಿವಿಸಿ
ಎನ್ನುತ್ತಾ ತನ್ನ ನಿಗಿ ನಿಗಿ ಹೊಳೆಯುವ
ಬಂಗಾರದ ಬಣ್ಣಕ್ಕೆ ಮೆಚ್ಚುತ್ತಾ...
'ಕೆಂಡವಾಗುದ ಕಲಿ' ಎನ್ನುತ್ತದೆ ಕೆಂಡ.

ಆರೇ ಮೌನದ
ಹಾದಿಯಲ್ಲಿ ಮೆಲ್ಲಗೆ ಉಸುರುತ್ತದೆ ಇದ್ದಿಲು
ಕೆಂಡವಾಗಲು ಎಷ್ಟು ಹೊತ್ತು?
ಒಟ್ಟಾಗಿ ಜೋಡಿಸಿ ದರಕುಗಳ
ಮೇಲಿಷ್ಟು ಎಸೆದು ಸಣ್ಣ ಕಿಡಿಬೆಂಕಿ
ಸಾಕು ನಾನು ಕೆಂಡವಾಗುವುದಕ್ಕೆ,
ಕಂಡಕಂಡಲ್ಲೆಲ್ಲಾ ಉರಿಯ ಹಚ್ಚಲಿಕ್ಕೆ



ಬಣ್ಣವಲ್ಲ ಗುಣ
ಮುಟ್ಟಿ ತಟ್ಟಿ ಮುದ್ದಿಸದಿದ್ದರೂ
ಅಪರೂಪಕ್ಕೆ ಮುಗಿದ ಹಲ್ಲಿನ ಪುಡಿಯ
ಜಾಗಕ್ಕೆ ಒಯ್ದು ಕೂರಿಸುತ್ತಾರೆ ನನ್ನ
ಕೈಯಲ್ಲಿಡಿದು, ಹಲ್ಲಿಗೂ ಬಳಿದು
ಮೆತ್ತಿಕೊಳ್ಳುತ್ತಾರೆ
ಆದರೆ ಮುಟ್ಟುವುದಿರಲಿ ನಿನ್ನ
ಹತ್ತಿರಕೂ ಬರಲೊಲ್ಲರು ಜನ
ಕಾರಣವಿಷ್ಟೇ!
ಉರಿಯ ಕಾರುವ ನಿನ್ನ ಸುಗುಣ
ಕನಲುತ್ತದೆ ಇದ್ದಿಲು...

ಅಗ್ನಿದಿವ್ಯಕೂ, ಬಡಬಾಗ್ನಿ
ಸವ್ಯಕೂ ನಾನೇ ಬೇಕು
ಉರಿಯಬೇಕು ಜ್ವಾಲೆ
ಶುದ್ಧ ಹೊಳೆಯಬೇಕು ದಿವ್ಯ
ಕಳಂಕ ತೊಳೆಯಲು,
ದೈವ ಒಲಿಯಲು ಹಾಯಬೇಕು ಉರಿಉಂಡೆಗಳ
ಎನ್ನುತ್ತದೆ ಕೆಂಪುಗಣ್ಣ ಕೆಂಡ
ಇದ್ದಿಲಂತ ಇದ್ದಿಲಾಗಲು
ಕೆಂಡ ನಿಗಿನಿಗಿ ಉರಿದರೆ ಮಾತ್ರ
ಎಷ್ಟು ಉರಿದುರಿದೂ ಹೊಂಬಣ್ಣ
ಹೊಳೆದರೂ ಕೆಂಡದ
ರೂಪಾಂತರ ಇದ್ದಿಲೇ ಅಣ್ಣ...